# ಎನಗೂ ಆಣೆ ರಂಗ ನಿನಗೂ ಆಣೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The lyrics in both the reference books above are matching. The singer has also followed the same lyrics.

ರಾಗ: ಶಂಕರಾಭರಣ ತಾಳ: ತ್ರಿಪುಟ

ಎನಗೂ ಆಣೆ ರಂಗ ನಿನಗೂ ಆಣೆ ॥ ಪ ॥
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ॥ ಅಪ ॥

ನಿನ್ನನು ಬಿಟ್ಟು ಅನ್ಯರ ಭಜಿಸಿದರೆ ಎನಗೆ ಆಣೆ ರಂಗ
ಎನ್ನನು ನೀ ಕೈಬಿಟ್ಟು ಪೋದರೆ ನಿನಗೆ ಆಣೆ ॥ 1 ॥

ತನು ಮನ ಧನದಲಿ ವಂಚಕನಾದರೆ ಎನಗೆ ಆಣೆ ರಂಗ
ಮನಸು ನಿನ್ನೊಳು ನಿಲಿಸದಿದ್ದರೆ ನಿನಗೆ ಆಣೆ ॥ 2 ॥

ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ ರಂಗ
ಲೌಕಿಕವನ್ನು ಬಿಡಿಸದಿದ್ದರೆ ನಿನಗೆ ಆಣೆ ॥ 3 ॥

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ॥ 4 ॥

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ
ಪುರಂದರ ವಿಠಲ ನೀ ಒಲಿಯದಿದ್ದರೆ ನಿನಗೆ ಆಣೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ತಾವು ಒಬ್ಬರನ್ನೊಬ್ಬರು ಅಗಲಲಾಗದೆಂದು ಭಕ್ತನು ಇಬ್ಬರಿಗೂ ಆಣೆಯನ್ನು ಇಡುತ್ತಾನೆ, ಇವರಿಬ್ಬರನ್ನೂ ಅಗಲದಂತೆ ಮಾಡುವವರು ಸದ್ಭಕ್ತರು.

**ಲೌಕಿಕ** = ಸಂಸಾರ ವ್ಯವಹಾರ

**Classification:** Keerthane
**Ankita:** purandara vittala
**Location:** NA
**Category:** Bhakti
**Group Words:** Vishnu, ranga, deha, rokka, krishna, bhajane, nara,
**Pravachana:** NA
**Explanation:** NA